ಮಾಡಿದೆ. ಆದರೆ, ಮಾರನೆಯ ದಿನವೂ ಮತ್ತು ಎರಡು ಮೂರು ದಿನಗಳಾದ ನಂತರವೂ ಅವಳು ಅದೇ ವಿಷಯವನ್ನು ಮತ್ತೆ ಎತ್ತಿದಳು. ನನಗೆ ಜೋರಾಗಿ ನಗು ಬರುತ್ತಿತ್ತು. ಆದರೆ, ಅವಳ ಮನಸ್ಸಿನಲ್ಲಿ ಅದು ಹಾಗೇ ಗಟ್ಟಿಯಾಗಿ ಉಳಿದಿದ್ದುದು ನನಗೆ ಗೊತ್ತಾಯಿತು. ನನಗೂ ಅದರ ಬಗ್ಗೆ ಯೋಚನೆ ಮಾಡದೇ ಇರಲಾಗಲಿಲ್ಲ. ಈ ಕನಸು ಮಾತ್ರ ನನಗೆ ಏನೋ ದಾರಿ ತೋರಿಸಿಕೊಟ್ಟಿತು. ನನಗೆ ಅದರ ಬಗ್ಗೆ ಯಾವ ಸಂಶಯವೂ ಉಳಿಯಲಿಲ್ಲ. ನಾನವಳನ್ನು ದ್ವೇಷಿಸುತ್ತಿದ್ದೆ. ನಾನು ಬಹಳ ಸಂತೋಷದಿಂದಲೇ ಅವಳನ್ನು ತೊಲಗಿಸಿ ಬಿಡುಗಡೆ ಹೊಂದಬಲ್ಲೆ ಎಂದು ಅವಳು ಯೋಚನೆ ಮಾಡುತ್ತಿದ್ದಳು; ಅವಳಿಗೆ ಖಂಡಿತವಾಗಿಯೂ ಗೊತ್ತಿತ್ತು ತಾನು ಅಸಹನೀಯವಾಗಿ ವರ್ತಿಸುತ್ತಿದ್ದೇನೆಂದು. ಎಂದಾದರೂ ಅವಳನ್ನು ನಾನು ಕೊಲೆ ಮಾಡಬಹುದು ಎಂಬುದು ಅವಳಿಗೆ ಬಹಳ ಸ್ಪಷ್ಟವಾಗಿ ಅನ್ನಿಸಿತ್ತು. ಗಂಡಸರ ಆಲೋಚನೆಗಳು ಎಣಿಕೆಗೆ ಮೀರಿದ್ದು ಮತ್ತು ನಮಗೆಂತಹ ವಿಚಾರಗಳು ಬರುತ್ತವೆ ಎಂದರೆ ಹಾಗೆ ಯೋಚನೆ ಮಾಡಿದ್ದೆವು ಅಂತ ಒಪ್ಪಿಕೊಳ್ಳಲೂ ನಾವು ನಾಚಿಕೆಪಟ್ಟುಕೊಳ್ಳಬೇಕು ಹಾಗಿರುತ್ತವೆ. ಒಂದೊಂದು ಸಲ ಅವಳು ಒಬ್ಬ ಪ್ರಿಯಕರನೊಂದಿಗೆ ಓಡಿಹೋಗಿಬಿಡಲಿ ಎಂದೂ ಬಯಸುತ್ತಿದ್ದೆ, ಕೆಲವೊಮ್ಮೆ ನರಳಿಕೆಯಿಲ್ಲದ ಮತ್ತು ಆಕಸ್ಮಿಕ ಸಾವಿನಿಂದ ನನಗೆ ಸ್ವಾತಂತ್ರ್ಯ ಸಿಗಬಹುದು ಎಂದು ಅಂದುಕೊಳ್ಳುತ್ತಿದ್ದೆ; ಆದರೆ ನಾನು ಎಂದೂ ಬುದ್ಧಿಪೂರ್ವಕವಾಗಿಯೇ ಈ ಅಸಹನೀಯ ಪೀಡೆಯಿಂದ ಬಿಡುಗಡೆ ಹೊಂದಬಲ್ಲೆ ಎಂದು ಅಂದುಕೊಂಡಿರಲಿಲ್ಲ.

ಈ ಕನಸು ನಮ್ಮಿಬ್ಬರ ಮೇಲೂ ಅಸಾಧಾರಣವಾದ ಪರಿಣಾಮ ಬೀರಿತ್ತು. ನನ್ನ ಹೆಂಡತಿ ಇದರಿಂದ ದಿಗಿಲುಗೊಂಡಿದ್ದಳು, ಅವಳ ಕಟುವರ್ತನೆಯನ್ನು ಸ್ವಲ್ಪ ಕಡಿಮೆ ಮಾಡಿದ್ದಳು ಮತ್ತು ತಾಳ್ಮೆಯಿಂದ ವರ್ತಿಸಲಾರಂಭಿಸಿದಳು. ಆದರೆ, ನಮ್ಮ ಅಪಾರ್ಟ್‌ಮೆಂಟ್ ಕಡೆಗೆ ಮೆಟ್ಟಲು ಹತ್ತಿ ನಡೆಯುತ್ತಿರುವಾಗ ನನಗೆ ಮೆಟ್ಟಲಿನ ಕಟಾಂಜನದೆಡೆಗೆ ನೋಡದೇ ಇರಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಅವಳಿಗೆ ಬಿದ್ದ ಕನಸಿನಂತೆ ಮಾಡುವುದು ಎಷ್ಟು ಸುಲಭವಿದೆ ಎಂದು ಅನಿಸದೇ ಇರುತ್ತಿರಲಿಲ್ಲ. ಆ ಕಟಾಂಜನವನ್ನು ಮೇಲಿನಿಂದ ಕೆಳಗಿನವರೆಗೂ ನೋಡಿದಾಗ ಅದು ಅತಿ ಅಪಾಯಕರವಾಗಿ ಕಾಣುತ್ತಿತ್ತು. ನನ್ನ ಮನಸ್ಸಿನಲ್ಲಿ ಆಲೋಚನೆಯೊಂದು ತಟಕ್ಕನೇ ಹೊಳೆದು ದೃಢವಾಯಿತು. ನನ್ನ ಮನಸ್ಸಿನಿಂದ ಆ ಯೋಚನೆಯನ್ನು ಹೊರದೂಡಲು ಸಾಧ್ಯವಾಗಲೇ ಇಲ್ಲ. ಆಮೇಲೆ ಕೆಲವು ತಿಂಗಳು ಕಳೆದ ನಂತರ ನನ್ನ ಹೆಂಡತಿ ಒಂದು ದಿನ ರಾತ್ರಿ ನನ್ನನ್ನು ಎಬ್ಬಿಸಿದಳು. ನಾನು ತುಂಬಾ ಬಳಲಿದ್ದೆ ಮತ್ತು ಹತಾಶನಾಗಿದ್ದೆ. ಅವಳು ಬಿಳಿಚಿಕೊಂಡು ಕಂಪಿಸುತ್ತಿದ್ದಳು. ಅವಳಿಗೆ ಮತ್ತೊಮ್ಮೆ ಅದೇ ಕನಸು ಬಿದ್ದಿತ್ತು. ಅವಳ ದುಃಖದ ಕಟ್ಟೆಯೊಡೆದಿತ್ತು. ಕಣ್ಣೀರಿಡುತ್ತಾ ನಾನು ಅವಳನ್ನು ದ್ವೇಷ ಮಾಡ್ತೀನಾ ಅಂತ ಕೇಳಿದಳು. ನಾನು ರಷ್ಯಾದ ಎಲ್ಲಾ ಸಂತರ ಹೆಸರುಗಳ ಮೇಲೆ ಆಣೆ ಮಾಡಿ ಹೇಳಿದೆ, ನಾನವಳನ್ನು ಪ್ರೀತಿಸುತ್ತೇನೆಂದು. ಅಂತೂ ಕೊನೆಗೆ ಅವಳು ನಿದ್ದೆ ಮಾಡಿದಳು. ಅದಕ್ಕಿಂತ ಹೆಚ್ಚು ನನಗೇನೂ ಮಾಡಲು ಆಗಲಿಲ್ಲ. ನಾನು ಎಚ್ಚರವಾಗಿಯೇ ಮಲಗಿದ್ದೆ. ನನಗೆ ಅವಳು ಮೆಟ್ಟಲುಗಳಿಂದ ಉರುಳಿ ಕೆಳಗೆ ಬಿದ್ದಂತೆ ಭಾಸವಾಯಿತು. ಅವಳ ಚೀರಾಟ ಕೇಳಿಸಿತು ಮತ್ತು ಅವಳು ಕೆಳಗೆ ಬಿದ್ದ ಸದ್ದು ಜೋರಾಗಿ ಕೇಳಿಸಿತು. ನಾನು ಗಡಗಡ ನಡುಗಿದೆ.'

ಆ ರಷ್ಯನ್ ಮನುಷ್ಯ ಅಲ್ಲಿಗೇ ನಿಲ್ಲಿಸಿದ, ಅವನ ಹಣೆಯಲ್ಲಿ ಬೆವರ ಹನಿಗಳು ಕಾಣಿಸಿಕೊಂಡವು. ಅವನು ಕಥೆಯನ್ನು ಬಹಳ ಚೆನ್ನಾಗಿ ಮತ್ತು ನಿರರ್ಗಳವಾಗಿ ಹೇಳಿದ್ದರಿಂದ ನಾನು ಅದನ್ನು ಗಮನವಿಟ್ಟು ಕೇಳಿದೆ. ಬಾಟಲಿಯಲ್ಲಿ ವೋಡ್ಕಾ ಇನ್ನೂ ಉಳಿದಿತ್ತು; ಅದನ್ನು ಸುರಿದುಕೊಂಡು ಒಂದೇ ಗುಕ್ಕಿನಲ್ಲಿ ಕುಡಿದ.

'ಕೊನೆಗೂ ನಿನ್ನ ಹೆಂಡತಿ ಸತ್ತಿದ್ದು ಹೇಗೆ?' ನಾನು ಸ್ವಲ್ಪ ಹೊತ್ತು ಬಿಟ್ಟು ಕೇಳಿದೆ.